ದಿನಾಂಕಃ 14-07-2023 ರಂದು ಸಾಕ್ಷೀಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

4. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲು : ಶ್ರೀ. ಬಿ ಜೆ ಜಿ ವಕೀಲರಿಂದ ಆರೋಪಿತರ ಪರವಾಗಿ**

ನಮ್ಮ ಕಚೇರಿ ಚಿಕ್ಕೋಡಿಯಲ್ಲಿ ಇರುತ್ತದೆ ಎಂದರೆ ಸರಿ. ಈ ಘಟನೆಯಾಗುವ ಮುಂಚೆ ಒಂದುವರೆ ವರ್ಷದಿಂದ ನಾನು ಚಿಕ್ಕೋಡಿಯಲ್ಲಿ ಕಾರ್ಮಿಕ ನಿರೀಕ್ಷಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ. ರಸ್ತೆ ಕಾಮಗಾರಿ ನಮ್ಮ ಚಿಕ್ಕೋಡಿ ವ್ಯಾಪ್ತಿಯಲ್ಲಿ ನಡೆದಿತ್ತು ಎಂದರೆ ಸರಿ. ಸದರಿ ರಸ್ತೆಯ ಮೇಲೆ ಸಾಕಷ್ಟು ಬಾರಿ ನಾನು ಬಸ್ಸಿನಲ್ಲಿ ತಿರುಗಾಡಿರುತ್ತೇನೆ. ಪಂಚನಾಮೆಯನ್ನು ಘಟನೆ ನಡೆದ ಸ್ಥಳದಲ್ಲಿ ಡಿ.ವಾಯ್.ಎಸ್.ಪಿ. ಸಿಐಡಿ ಬೆಂಗಳೂರುರವರು ಬರೆದಿರುತ್ತಾರೆ. ಘಟನಾ ಸ್ಥಳಕ್ಕೆ ಹೋದಾಗ ಆ ದಿನ ಬೆಳಿಗ್ಗೆ 06.30 ಆಗಿತ್ತು. ಆಗ ಯಾವುದೇ ಕಾಮಗಾರಿ ಪ್ರಾರಂಭ ಇರಲಿಲ್ಲ. ಅಲ್ಲಿ ಸರ್ಕಾರದಿಂದ ರಸ್ತೆ ಕಾಮಗಾರಿ ನಡೆದಿತ್ತು ಎಂದರೆ ಸರಿ. ಸದರಿ ರಸ್ತೆ ಕಾಮಗಾರಿ ಗುತ್ತಿಗೆಯನ್ನು ಗದ್ದಮ ರಂಗಯ್ಯರವರಿಗೆ ಆಗಿತ್ತು ಎಂದು ಗೊತ್ತಾಯಿತು. ನಾವು ಘಟನಾ ಸ್ಥಳಕ್ಕೆ ಹೋಗಿ ವೀಕ್ಷಣೆ ಮಾಡಿದ ಬಗ್ಗೆ ಘಟನಾ ಸ್ಥಳದಲ್ಲಿ ಪೋಟೋ ತೆಗೆಯಲಾಗಿರುತ್ತದೆ. ಅದೇರೀತಿ ಗುಡಿಸಲು ಇರುವ ಬಗ್ಗೆ ತೋರಿಸಲು ಪೋಟೋವನ್ನು ತೆಗೆಯಲಾಗಿರುತ್ತದೆ. ಆ ದಿನ ತೆಗೆದಂತ ಪೋಟೋಗಳನ್ನು ಇವತ್ತಿನವರೆಗೂ ನಾನು ನೋಡಿರುವುದಿಲ್ಲ.

2. ನಮ್ಮ ಕೆಲಸಕ್ಕೆ ಸಂಬಂಧಿಸಿದಂತೆ ಚಿಕ್ಕೋಡಿಯಲ್ಲಿ ಒಂದು ಕಚೇರಿ ಇದ್ದು ಅದರಲ್ಲಿ ನಾನು ಮತ್ತು ಇನ್ನೊಬ್ಬ ಡಾಟಾ ಎಂಟ್ರಿ ಮಾಡುವ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತೇವೆ. ನಮ್ಮದು ಸಾರ್ವಜನಿಕ ಕಚೇರಿ ಎಂದರೆ ಸರಿ. ದಿನಚರಿಯಲ್ಲಿ ನನ್ನನ್ನು ಆ ದಿನ ಯಾರು ಯಾವ ಕಾರಣಕ್ಕೆ ಎಲ್ಲಿಗೆ ಬರಬೇಕೆಂದು ತಿಳಿಸಿದ್ದರು ಆ ಕಾರಣ ಅಲ್ಲಿಗೆ ಹೋಗುತ್ತಿದ್ದೇನೆ ಎಂದು ಬರೆದಿರುತ್ತೇನೆ. ಪ್ರತಿದಿನ ನಾನು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ ಬಗ್ಗೆ ದಿನಚರಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಘಟನಾ ಸ್ಥಳಕ್ಕೆ ಹೋಗಿ ಭೇಟಿ ಕೊಟ್ಟು ವಾಪಸ್ಸು ನಮ್ಮ ಕಚೇರಿಗೆ ಬಂದಾಗ

ಸಾಯಂಕಾಲ 06.00 ಗಂಟೆ ಆಗಿತ್ತು. ನನಗೆ ತಮಿಳು ಮತ್ತು ತೆಲುಗು ಬರುವುದಿಲ್ಲ. ಅಲ್ಲಿರುವ ಎಲ್ಲಾ ಕಾರ್ಮಿಕರಿಗೆ ತೆಲುಗು ಭಾಷೆ ಬಿಟ್ಟು ಯಾವುದೇ ಭಾಷೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಅಲ್ಲಿರ್ತಕ್ಕಂತ ಕಾರ್ಮಿಕರ ಹೇಳಿಕೆಗಳನ್ನು ಬರೆದುಕೊಂಡಿರುತ್ತಾರೆ. ಆ ಹೇಳಿಕೆಯನ್ನು ಹಿಂದಿಯಲ್ಲಿ ಅಥವಾ ತೆಲುಗಿನಲ್ಲಿ ಹೇಳಿದ್ದನ್ನು ಕನ್ನಡಕ್ಕೆ ಅನುವಾದ ಮಾಡಿಕೊಳ್ಳಲಾಗಿದೆ ಎಂದು ನಮೂದು ಮಾಡಲಾಗಿರುತ್ತದೆ. ಕಾರ್ಮಿಕರು ತೆಲುಗು ಮತ್ತು ಹಿಂದಿಯಲ್ಲಿ ಹೇಳಿದ ವಿಷಯವನ್ನು ಕನ್ನಡಕ್ಕೆ ಯಾರು ಅನುವಾದ ಮಾಡಿ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

3. ಪಂಚನಾಮೆಯನ್ನು ಬರೆಯಲು ನಾನು ಹೇಳಿರುವುದಿಲ್ಲ. ಪಂಚನಾಮೆಯಲ್ಲಿ ಬಿಟ್ಟು ಬೇರೆ ಎಲ್ಲಿಯೂ ಸಹಿ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಿಃ02.01.2018 ರಂದು ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಹೇಳಿಕೆಯ ಮೇಲೆ ನನ್ನ ಸಹಿಯನ್ನು ಮಾಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಕಾರ್ಮಿಕ ಅಧಿಕಾರಿ ಎಂದು ಪಂಚನಾಮೆ ಮೇಲೆ ಪೋಲೀಸ ಠಾಣೆಯಲ್ಲಿ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಂಚನಾಮೆ ಮೇಲೆ ಬಾಲ್ ಪೆನ್ನಿನಿಂದ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ಪಂಚನಾಮೆಯನ್ನು ಬಾಲ್ ಪೆನ್ನಿನಿಂದ ಬರೆಯಲಾಗಿರುತ್ತದೆ. ಪಂಚನಾಮೆಯನ್ನು ಠಾಣೆಯಲ್ಲಿ ಟೈಪು ಮಾಡಿ ನಾನು ಕಚೇರಿಯಲ್ಲಿದ್ದಾಗ ಅಲ್ಲಿ ನನ್ನ ಸಹಿಯನ್ನು ಸದರಿ ಪಂಚನಾಮೆಗೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ಪಿರ್ಯಾದಿಯನ್ನು ಹೈದರಾಬಾದಿನಲ್ಲಿರುವ ಒಂದು ಸಂಸ್ಥೆಯವರು ನೀಡಿರುತ್ತಾರೆ. ಅಲ್ಲಿ ಯಾವುದೇ ಮಾನವ ಸಾಗಾಣಿಕೆ ಅಥವಾ ಅಲ್ಲಿದ್ದಂತ ಯಾವುದೇ ಕಾರ್ಮಿಕರನ್ನು ಜೀತ ಕಾರ್ಮಿಕರನ್ನಾಗಿ ಇಟ್ಟುಕೊಂಡು ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಪಿರ್ಯಾದಿ ನಾಗಭೂಷನ ನನಗೆ ಪರಿಚಯ ಇರುವುದಿಲ್ಲ. ಆರೋಪಿತರು ಯಾವುದೇ ಕಾರ್ಮಿಕರನ್ನು ಜೀತ ಕಾರ್ಮಿಕರನ್ನಾಗಿ ಇಟ್ಟುಕೊಂಡಿರಲಿಲ್ಲ ಮತ್ತು ಮಾನವ ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.